ಓ.ಎಸ್. ನಂ. 39/2017
ಪಿ.ಡಬ್ಯ್ಲೂ- 2

(ಇಂದು ದಿಃ 25-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು :- ಶ್ರೀ **BSS** ವಕೀಲರಿಂದ :-

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಂಗತಿಗಳು ನನಗೆ ಗೊತ್ತು ದಾವಾ ಸ್ವತ್ತು 7 ಎಕರೆ ಇದೆ. ಅದಕ್ಕೆ ಚೆಕ್ ಬಂದಿ ಪೂರ್ವಕ್ಕೆ ಲಕ್ಷ್ಮೀಕಾಂತರವರ ಜಮೀನು, ಪಶ್ಚಿಮಕ್ಕೆ ಬಾಬೇಶ, ಉತ್ತರಕ್ಕೆ 1 ನೇ ವಾದಿ ಜಮೀನು, ದಕ್ಷೀಣಕ್ಕೆ ವೇಂಕಂಟರೆಡ್ಡಿ ಜಮೀನು. ದಾವಾ ಜಮೀನಿನ ಪಹಣಿ ನೋಡಿದ್ದೇನೆ. ದಾವಾ ಜಮೀನು 2 ನೇ ಪ್ರತಿವಾದಿ ಹೆಸರಿನಲ್ಲೆ ಇದೆ. ನಾನು ಇತ್ತಿಚಿನ ಪಹಣಿ ಮಾತ್ರ ನೋಡಿದ್ದೇನೆ ಹಳೆಯ ಪಹಣಿಗಳನ್ನು ನೋಡಿಲ್ಲ. 1972 ರಿಂದ ಪಹಣಿಗಳು ವೇಂಕಟಯ್ಯುನ ಹೆಸರಿನಲ್ಲಿ ಬರುತ್ತಿದ್ದವು ಎಂದರೆ ನಾನು ನೋಡಿಲ್ಲ. ಸರ್ವೇ 119 ರಲ್ಲಿ 2 ನೇ ಪ್ರತಿವಾದಿ ಸ್ವಾದೀನದಲ್ಲ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆರದು 1 ನೇ ವಾದಿ ಇದ್ದಾರೆ ಎಂದು ಹೇಳುತ್ತಾರೆ. 1972 ರಲ್ಲಿ ಚಿನ್ನಾ ನರಸರೆಡ್ಡಿ ದಾವಾ ಜಮೀನನ್ನು ವೇಂಕಟಯ್ಯು ನಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ನಾನಾ 1985 ರಲ್ಲಿ ಜನಿಸಿದ್ದೇನೆ. 1972 ರಿಂದ ವೇಂಕಟಯ್ಯು ನಂತರ ಅವರ ಮಕ್ಕಳು ದಾವಾ ಜಮೀನಿನಲ್ಲಿ ಖಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನು ಮತ್ತು 1 ನೇ ವಾದಿಯ ಇನ್ನೊಂದು ಜಮೀನಿನ ನಡುವೆ ಬದುವು ಇದೆ ಎಂದರೆ ಸರಿ. ಸಾಕ್ಷಿ ಮುಂದವರೆದು ಮುಂಚೆ ಇರಲಿಲ್ಲಾ , 4 -5 ವರ್ಷಗಳಿಂದೆ ಬದುವು ಹಾಕಿದ್ದಾರೆ ಎಂದು ಹೇಳುತ್ತಾರೆ. ವೇಂಕಟಯ್ಯು ಮತ್ತು 2 ನೇ ಪ್ರತಿವಾದಿ ರಾತ್ರಿ ಬದುವು ಹಾಕುವಾಗ ನಾನು ಹೋಗಿ ನೋಡಿಲ್ಲ. ಬೆಳಿಗ್ಗೆ ಗೊತ್ತಾಗಿದೆ. ದಾವಾ ಜಮೀನಿನಲ್ಲಿ ಹೆಸರು ಬೆಳೆ ಮಾಡಿದ್ದರು. 1 ನೇ ವಾದಿ ಬಿತ್ತನೇ ಮಾಡಿದ್ದರು. 1 ನೇ ವಾದಿ ಬಿತ್ತನೇ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೇ ಎಂದರೆ ಸರಿಯಲ್ಲ.

ದಾವಾ ಜಮೀನಿನಲ್ಲಿ 1 ಮತ್ತು 2 ನೇ ವಾದಿಯರು ಖಬ್ಜಾದಲ್ಲಿ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ಮತ್ತು ನಾನು ಸಂಬಂಧಿಕರು ಅಲ್ಲ. ನಾನು 1 ನೇ ವಾದಿ ಒಂದೇ ಸಮೂದಾಯದವರು ಎಂದರೆ ಸರಿ. ದಾವಾ ಜಮೀನಿನಲ್ಲಿ 1972 ರಿಂದ ವೇಂಕಟಯ್ಯು ನಂತರ 2 ನೇ ಪ್ರತಿವಾದಿ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1 ನೇ ವಾದಿ ನನ್ನ ಸಂಬಂಧಿ ಆಗಿರುವ ಕಾರಣ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇ ನೆ ಎಂದರೆ ಸರಿಯಲ್ಲ.

ಓ.ಎಸ್. ನಂ. 39/2017
ಪಿ.ಡಬ್ಲ್ಯೂ- 3

ಪಾಟೀ ಸವಾಲು :- ಶ್ರೀ **SKD** ವಕೀಲರಿಂದ :-

ಸರ್ವೇ ನಂಬರ 121 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ನನಗೆ ಗೊತ್ತಿಲ್ಲ. ಸರ್ವೇ ನಂಬರ 121/1/ A 3 ಎಕರೆ 24 ಗುಂಟೆ 1 ಮತ್ತು 2 ನೇ ವಾದಿಯರ ಹೆಸರಿನಲ್ಲಿ ಇದೆ ಎಂದರೆ ಸರಿ. ನಾನು PUC ಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಸರ್ವೇ 121/1A ರ ಮೇಲೆ 1 ಮತ್ತು 2 ನೇ ವಾದಿಯರು SBM ಸೇಡಂ ಶಾಖೆಯಲ್ಲಿ 2014 -15 ರಲ್ಲಿ 72 ಸಾವಿರ ಸಾಲ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ವಾದಿಯರ ಹೆಸರಿನಲ್ಲಿ ಮುಟೇಷನ್ 2016 ರಲ್ಲಿ ಆಗಿತು್ತ ಎಂದರೆ ನನಗೆ ಗೊತ್ತಿಲ್ಲ. ಸರ್ವೇ 121/1/A ಮುಂಚೆ ನರಸರೆಡ್ಡಿ ತಂದೆ ನಾಗಪ್ಪ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ವಿಭಾಗದ ಆಧಾರದ ಮೇಲೆ 2016-17 ರಲ್ಲಿ 1 ಮತ್ತು 2 ನೇ ವಾದಿಯರ ಹೆಸರಿನಲ್ಲಿ ಮುಟೇಷನ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೇ ನಂಬರ 121/1/ B 5 ಎಕರೆ ಸತ್ಯನಾರಯಣ ತಂದೆ ವೇಂಕಟಯ್ಯನರ ಹೆಸರಿನಲ್ಲಿ ಎಂದರೆ ಸರಿ. ಈಗ ಸರ್ವೇ ನಂಬರ 121/2 5 ಎಕರೆ ಮುಕುಂದ ರವರ ಹೆಸರಿನಲ್ಲಿ ಆಗಿದೆ ಎಂದರೆ ಸರಿ. ಸರ್ವೇ ನಂಬರ 121/3 ವಿಸ್ತೀರ್ಣ 1 ಎಕರೆ 32 ಗುಂಟೆ ಖರೀದಿ ಪತ್ರದ ಆಧಾರದ ಮೇಲೆ ಶ್ರೀನಿವಾಸ , ರವೀಂದ್ರ , ಜಗದೀಶ ಮತ್ತು ರಾಮಲು ರವರ ಹೆಸರಿನಲ್ಲಿ ಆಗಿದೆ ಎಂದರೆ ಸರಿ. ಪಹಣಿಗಳಲ್ಲಿ ಬರುತ್ತಿರುವ ಹೆಸರುಗಳು ಪ್ರಕಾರ ಅವರವರು ಸ್ವಾದೀನದಲ್ಲಿದ್ದಾರೆ ಎಂದರೆ ಸರಿ. ಮೇಲಿನ 3 ಸರ್ವೇ ನಂಬರ ಜಮೀನುಗಳ ಚಕ್ ಬಂದಿಗಳನ್ನು ಪ್ರತೇಖ ವಾಗಿ ಹೇಳಲು ಆಗುವುದಿಲ್ಲ. ಪಹಣಿಗಳಲ್ಲಿ ಬರುತ್ತಿರುವಂತೆ ಆಯಾ ಸರ್ವೇ ನಂಬರಗಳಲ್ಲಿ ಅವರವರು ಮಾಲೀಕರಾಗಿ ಸ್ವಾದೀನದಲ್ಲಿದ್ದಾರೆ ಎಂದರೆ ಸರಿ. ನಾನು ವಾದಿಯರ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಸೇಡಂ.

(ಇಂದು ದಿಃ 25-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:-** ಶ್ರೀ **SKD** ವಕೀಲರಿಂದ **:-**

ನಾನು ಅವಿದ್ಯಾವಂತ. ರೂಡಿಮೇಲೆ ಇಂಗ್ಲೀಷನಲ್ಲಿ ಸಹಿ ಮಾಡುತ್ತೇನೆ. ಸರ್ವೇ ನಂಬರ 119 ರಲ್ಲಿ ಒಟ್ಟು 7 ಎಕರೆ , ಸರ್ವೇ ನಂಬ ರ 121 ರಲ್ಲಿ ಒಟ್ಟು 5 ಎಕರೆ ಜಮೀನು ಇದೆ. ನನ್ನ ಜಮೀನು ಸರ್ವೇ ನಂಬರ 110. ಸರ್ವೇ ನಂಬರ 119 ರಲ್ಲಿ 2 ಹಿಸಾ ಆಗಿವೆ. ಸರ್ವೇ ನಂಬರ 119/A ರ ವಿಸ್ತೀರ್ಣ ಮತ್ತು ಸರ್ವೇ ನಂಬರ 119/B ರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸರ್ವೇ ನಂಬರ 121/1 5 ಎಕರೆ ಇದೆ. ಸರ್ವೇ ನಂಬರ 121/2 5 ಎಕರೆ ಇದೆ. ಸರ್ವೇ ನಂಬರ 121/3 ಎಷ್ಟು ವಿಸ್ತೀರ್ಣ ಹೊಂದಿದೆ ಗೊತ್ತಿಲ್ಲ. ಸರ್ವೇ ನಂಬರ 119/B ರಲ್ಲಿ 7 ಎಕರೆ 6 ಗುಂಟೆ ಜಮೀನು 2 ನೇ ಪ್ರತಿವಾದಿ ಹೆಸರಿನಲ್ಲಿ ಪಹಣಿ ಬುರತ್ತಿದೆ ಎಂದರೆ ಸರಿ. ಸರ್ವೇ ನಂಬರ 121/1/A 3 ಎಕರೆ 24 ಗುಂಟೆ 1 ನೇ ವಾದಿ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ . ಸರ್ವೇ ನಂಬರ 121/1/B 5 ಎಕರೆ ಸತ್ಯನಾರಾಯಣರವರ ಹೆಸರಿಗೆ ಬರುತ್ತಿದೆ ಎಂದರೆ ಸರಿ . ಸರ್ವೇ ನಂಬರ 121/3 1 ಎಕರೆ 32 ಗುಂಟೆ ಶ್ರೀನಿವಾಸ , ರವೀಂದ್ರ , ಜಗದೀಶ ಮತ್ತು ರಾಮಲು ರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ . ಪಹಣಿಗಳಲ್ಲಿ ಅವರವರ ಹೆಸರಿಗೆ ತೋರಿಸಿದಂತೆ ಅವರವರು ಜಮೀನುಗಳಲ್ಲಿ ಖಬ್ಜಾದಲ್ಲಿದ್ದಾರೆ ಎಂದರೆ ಸರಿ. ಸುಮಾರು 35 -40 ವರ್ಷಗಳಿಂದೆ ಮೇಲಿನ ಎಲ್ಲಾ ಜಮೀನುಗಳು ವೇಂಕಟಯ್ಯರವರ ಹೆಸರಿನಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ವೇಂಕಟಯ್ಯ ಸತ್ಯನಾರಾಯಣರವರಿಗೆ 5 ಎಕರೆ ಜಮೀನು ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಅದರ ಸರ್ವೇ ನಂಬರ 121/1/B ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ 119 ರಲ್ಲಿ 7 ಎಕರೆ 6 ಗುಂಟೆ 2 ನೇ ಪ್ರತಿವಾದಿ ಹೆಸರಿಗೆ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನಾನು 1 ಮತ್ತು 2 ನೇ ವಾದಿಯರ ಮಾತು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ.

**(ಶ್ರೀ BSS ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ನೀಡಲಾಯಿತು.)**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.